**All India Radio: Bangalore**
**National Bulletin In Kannada**
**30.01.2025 07.35 a.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**<><><><>**

ಮುಖ್ಯಾಂಶಗಳು

1. ನಾಳೆಯಿಂದ ಸಂಸತ್ ಬಜೆಟ್ ಅಧಿವೇಶನ ಆರಂಭ ; ಸುಗಮ ಕಲಾಪಕ್ಕಾಗಿ ಇಂದು ಸರ್ವಪಕ್ಷಗಳ ಸಭೆ ನಡೆಸಲಿರುವ ಕೇಂದ್ರ ಸರ್ಕಾರ
2. ಇಸ್ರೋದಿಂದ ಐತಿಹಾಸಿಕ ೧೦೦ನೇ ಉಪಗ್ರಹ ಯಶಸ್ವಿ ಉಡಾವಣೆ ; ದೇಶದ ಬಾಹ್ಯಾಕಾಶ ಪಯಣ ಮತ್ತಷ್ಟು ಎತ್ತರಕ್ಕೆ - ಪ್ರಧಾನಿ ನರೇಂದ್ರ ಮೋದಿ
3. ೨೦೩೦ ರ ವೇಳೆಗೆ ನವಿಕರೀಸಬಹುದಾದ ಇಂಧನ ಮೂಲಗಳಿಂದ ೫೦೦ ಗೀಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಗುರಿ - ಸಚಿವ ಪ್ರಲ್ಹಾದ್ ಜೋಶಿ
4. ತ್ರೀವೇಣಿ ಸಂಗಮದಲ್ಲಿ ಕಾಲ್ತುಳಿತ ; ಇಂದು ಪ್ರಯಾಗ್‌ರಾಜ್‌ಗೆ ಮುಖ್ಯ ಕಾರ್ಯದರ್ಶಿ-ಪೊಲೀಸ್ ಮಹಾನಿರ್ದೇಶಕರ ಭೇಟಿ, ಪರಿಶೀಲನೆ
5. ೩೮ನೇ ರಾಷ್ಟ್ರೀಯ ಕ್ರೀಡಾಕೂಟ ; ಮೊದಲ ದಿನ ಕರ್ನಾಟಕದ ಅಥ್ಲಿಟ್‌ಗಳಿಂದ ೫ ಚಿನ್ನದ ಪದಕಗಳೊಂದಿಗೆ ಅದ್ಭುತ ಪ್ರದರ್ಶನ

<><><><>

ನಾಳೆಯಿಂದ ಸಂಸತ್ತಿನ ಬಜೆಟ್ ಅಧಿವೇಶನ ಆರಂಭವಾಗಲಿರುವ ಹಿನ್ನೆಲೆಯಲ್ಲಿ ಸರ್ಕಾರ ನವದೆಹಲಿಯಲ್ಲಿಂದು ಸರ್ವಪಕ್ಷ ಸಭೆ ಕರೆದಿದೆ. ಸಭೆಯಲ್ಲಿ, ಸರ್ಕಾರವು ಸದನದ ನಾಯಕರೊಂದಿಗೆ ಚರ್ಚೆ ನಡೆಸಲಿದೆ ಮತ್ತು ಸುಗಮ ಕಲಾಪ ಖಾತ್ರಿಪಡಿಸಿಕೊಳ್ಳಲು ಪ್ರತಿಪಕ್ಷಗಳ ಸಹಕಾರವನ್ನು ಕೋರಲಿದೆ. ನಾಳೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಸತ್ತಿನ ಎರಡೂ ಸದನಗಳ ಜಂಟಿ ಸಭೆಯನ್ನುದ್ದೇಶಿಸಿ ಭಾಷಣ ಮಾಡಲಿದ್ದು, ಅದರೊಂದಿಗೆ ಬಜೆಟ್ ಅಧಿವೇಶನ ಆರಂಭವಾಗಲಿದೆ. ರಾಷ್ಟ್ರಪತಿಗಳ ಭಾಷಣದ ನಂತರ ಲೋಕಸಭೆ ಮತ್ತು ರಾಜ್ಯಸಭೆಗಳು ಸ್ವಲ್ಪ ಕಾಲ ಕಲಾಪ ನಡೆಸಲಿದ್ದು, ಆಗ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಆರ್ಥಿಕ ಸಮೀಕ್ಷೆಯನ್ನು ಮಂಡಿಸಲಿದ್ದಾರೆ. ಶನಿವಾರ ಹಣಕಾಸು ಸಚಿವರು ಕೇಂದ್ರ ಬಜೆಟ್-೨೦೨೫-೨೬ ಅನ್ನು

ಮಂಡಿಸುವರು. ಸೋಮವಾರ ರಾಷ್ಟ್ರಪತಿಗಳ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಲೋಕಸಭೆ ಮತ್ತು ರಾಜ್ಯಸಭೆ ಚರ್ಚಿಸಲಿದೆ. ನಾಳೆ ಆರಂಭವಾಗುವ ಬಜೆಟ್ ಅಧಿವೇಶನದ ಮೊದಲ ಭಾಗವು ಫೆಬ್ರವರಿ ೧೩ ರವರೆಗೆ ಮುಂದುವರಿಯುತ್ತದೆ. ಬಜೆಟ್ ಅಧಿವೇಶನದ ಎರಡನೇ ಹಂತವು ಮಾರ್ಚ್ ೧೦ ರಿಂದ ಏಪ್ರಿಲ್ ೪ ರವರೆಗೆ ನಡೆಯಲಿದೆ.

ಧ್ವನಿ: ಭುಪೇಂದ್ರ (೪೧ ಸೆಕೆಂಡ್ಸ್)

<><><><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ -ಇಸ್ರೋ ಐತಿಹಾಸಿಕ ೧೦೦ನೇ ಉಪಗ್ರಹ ಯಶಸ್ವಿ ಉಡಾವಣೆ ಮಾಡಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ಈ ಅದ್ಭುತ ಮೈಲಿಗಲ್ಲು ರಾಷ್ಟ್ರಗಳ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳ ದೂರದೃಷ್ಟಿ, ಸಮರ್ಪಣೆ ಮತ್ತು ಬದ್ಧತೆಯನ್ನು ವಿವರಿಸುತ್ತದೆ ಎಂದು ಹೇಳಿದ್ದಾರೆ. ಖಾಸಗಿ ವಲಯವು ಕೈಜೋಡಿಸುವುದರೊಂದಿಗೆ, ದೇಶದ ಬಾಹ್ಯಾಕಾಶ ಪಯಣವು ಹೊಸ ಎತ್ತರವನ್ನು ಸಾಧಿಸುವುದನ್ನು ಮುಂದುವರಿಸುತ್ತದೆ ಎಂದು ಅವರು ತಿಳಿಸಿದರು.

<><><><>

ಶ್ರೀಹರಿಕೋಟಾದಿಂದ ಇಸ್ರೋ ನಡೆಸಿದ ೧೦೦ನೇ ಜಿಎಸ್‌ಎಲ್‌ವಿ-ಎಫ್೧೫ ಉಪಗ್ರಹ ಉಡಾವಣೆ ದೇಶದ ಬಾಹ್ಯಾಕಾಶ ಪಯಣದಲ್ಲಿ ಒಂದು ದೊಡ್ಡ ಸಾಧನೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಬಣ್ಣಿಸಿದ್ದಾರೆ. ಇಸ್ರೋದ ಸಾಧನೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಡಾ. ಸಿಂಗ್, ದೇಶದ ಬಾಹ್ಯಾಕಾಶ ವಲಯವು ಮೂಲಸೌಕರ್ಯ ಮತ್ತು ಹೂಡಿಕೆ ಎರಡರಲ್ಲೂ ಅಭೂತಪೂರ್ವ ವಿಸ್ತರಣೆಗೆ ಒಳಗಾಗಿದೆ ಎಂದರು. ದೇಶದ ಬಾಹ್ಯಾಕಾಶ ವಲಯಕ್ಕೆ ಅಡಿಪಾಯ ಹಾಕುವಲ್ಲಿ ವಿಕ್ರಮ್ ಸಾರಾಭಾಯ್ ಮತ್ತು ಸತೀಶ್ ಧವನ್ ಅವರಂತಹ ಆರಂಭಿಕ ಪ್ರವರ್ತಕರು ನೀಡಿದ ಕೊಡುಗೆಗಳನ್ನು ಅವರು ಪ್ರಸ್ತಾಪಿಸಿದರು. ವಿದೇಶಿ ಉಪಗ್ರಹ ಉಡಾವಣೆಗಳಲ್ಲಿ ಶೇ. ೬೦ ರಷ್ಟು ಇಸ್ರೋ ಮೂಲಕವೇ ನಡೆಯುತ್ತಿವೆ. ಪ್ರಸ್ತುತ ೮ ಬಿಲಿಯನ್ ಡಾಲರ್ ಮೌಲ್ಯದ ಬಾಹ್ಯಾಕಾಶ ಆರ್ಥಿಕತೆಯು ಮುಂದಿನ ದಶಕದಲ್ಲಿ ೪೪ ಬಿಲಿಯನ್ ಡಾಲರ್ ತಲುಪುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.

ಧ್ವನಿ: ಜಿತೇಂದ್ರ ಸಿಂಗ್ (೨೪ ಸೆಕೆಂಡ್ಸ್)

<><><><>

೨೦೩೦ರ ವೇಳೆಗೆ ನವೀಕರಿಸಬಹುದಾದ ಇಂಧನಗಳ ಮೂಲಕ ೫೦೦ ಗಿಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಸರ್ಕಾರ ಹೊಂದಿದೆ ಎಂದು ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ೩ನೇ ಭಾರತ ಇಂಧನ ಪರಿವರ್ತನೆ ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮುಂಬರುವ ವರ್ಷಗಳಲ್ಲಿ ಇಂಧನ ಬೇಡಿಕೆ ದ್ವಿಗುಣಗೊಳ್ಳುವ ನಿರೀಕ್ಷೆಯಿದೆ ಮತ್ತು ಸುಮಾರು ಶೇ.೫೦ರಷ್ಟು ಅಗತ್ಯವನ್ನು ನವೀಕರಿಸಬಹುದಾದ ಇಂಧನದಿಂದ ಪೂರೈಸುವ ನಿರೀಕ್ಷೆಯಿದೆ ಎಂದರು. ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯಡಿಯಲ್ಲಿ ಉದ್ದೇಶಿತ ಒಂದು ಕೋಟಿಯಲ್ಲಿ ೮.೫ ಲಕ್ಷ ಸೌರ ಫಲಕಗಳನ್ನು ಈಗಾಗಲೇ ಅಳವಡಿಸಲಾಗಿದೆ. ಅಲ್ಲದೆ, ಕಳೆದ ಹತ್ತು ವರ್ಷಗಳಲ್ಲಿ, ದೇಶದ ಸ್ಥಾಪಿತ ನವೀಕರಿಸಬಹುದಾದ ಸಾಮರ್ಥ್ಯವು ೨೦೧೪ರಲ್ಲಿ ೭೫.೫೨ ಗಿಗಾವ್ಯಾಟ್‌ಗಳಿಂದ ಇದೀಗ ೨೨೦ ಗಿಗಾವ್ಯಾಟ್‌ಗಳಿಗೆ ಸುಮಾರು ಶೇಕಡ ೨೦೦ರಷ್ಟು ಹೆಚ್ಚಾಗಿದೆ ಎಂದು ಸಚಿವರು ಹೇಳಿದರು. ಇದೇ ವೇಳೆ ಸಚಿವರು ಎಫ್ ಐಸಿಸಿಐನ 'ಭಾರತದ ಇಂಧನ ಪರಿವರ್ತನೆ ಸಬಲೀಕರಣ' ಕುರಿತ ವರದಿಯನ್ನು ಬಿಡುಗಡೆ ಮಾಡಿದರು.

<><><><>

ಉತ್ತರಪ್ರದೇಶದ ಪ್ರಯಾಗ್ ರಾಜ್‌ನ ತ್ರಿವೇಣಿ ಸಂಗಮ್ ಘಾಟ್‌ನಲ್ಲಿ ನಿನ್ನೆ ನಡೆದ ಕಾಲ್ತುಳಿತದ ಘಟನೆಯ ನಂತರ ಮಹಾಕುಂಭದಲ್ಲಿ ಭದ್ರತಾ ವ್ಯವಸ್ಥೆಗಳನ್ನು ಪರಿಶೀಲಿಸಲು ಉತ್ತರ ಪ್ರದೇಶದ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರು ಇಂದು ಪ್ರಯಾಗ್‌ರಾಜ್‌ಗೆ ಭೇಟಿ ನೀಡಲಿದ್ದಾರೆ.  ಈ ಘಟನೆಯಲ್ಲಿ ಮೂವತ್ತು ಭಕ್ತರು ಸಾವನ್ನಪ್ಪಿದ್ದು, ೬೦ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಗಾಯಗೊಂಡ ಭಕ್ತರು ಸದ್ಯ ಸ್ಥಳೀಯ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮೇಳ ಪ್ರದೇಶದಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ನಮ್ಮ ವರದಿಗಾರರು ವರದಿ ಮಾಡಿದ್ದಾರೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಮುಖ್ಯ ಕಾರ್ಯದರ್ಶಿ ಮತ್ತು ಡಿಜಿಪಿಗೆ ಪರಿಸ್ಥಿತಿಯನ್ನು ನಿರ್ಣಯಿಸಲು ಮತ್ತು ಈ ಸಂಬಂಧ ವರದಿಯನ್ನು ನೀಡುವಂತೆ ಸೂಚಿಸಿದ್ದಾರೆ. ಅವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ತನಿಖೆ ನಡೆಸಲಿದ್ದಾರೆ. ನಿನ್ನೆ ಸಂಗಮ್ ಬಳಿಯ ಅಖಾಡ ಮಾರ್ಗದಲ್ಲಿ ಈ ದುರಂತ ನಡೆದಿದೆ. ಮುಖ್ಯಮಂತ್ರಿ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದಾರೆ ಮತ್ತು ಮೂವರು ಸದಸ್ಯರ ನ್ಯಾಯಾಂಗ ಆಯೋಗವನ್ನು ರಚಿಸಿದ್ದಾರೆ.

ಆಯೋಗವು ಘಟನೆಯ ಕಾರಣ ಮತ್ತು ಸಂದರ್ಭಗಳನ್ನು ತನಿಖೆ ಮಾಡುತ್ತದೆ ಮತ್ತು ಭವಿಷ್ಯದಲ್ಲಿ ಅಂತಹ ಘಟನೆಗಳನ್ನು ತಡೆಗಟ್ಟಲು ಕ್ರಮಗಳನ್ನು ಶಿಫಾರಸು ಮಾಡುತ್ತದೆ.

<><><><>

ಗಣರಾಜ್ಯೋತ್ಸವ ಕಾರ್ಯಕ್ರಮಗಳ ಸಮಾರೋಪದ ಅಂಗವಾಗಿ ನವದೆಹಲಿಯ ವಿಜಯ್ ಚೌಕ್‌ನಲ್ಲಿ ನಿನ್ನೆ ರಾತ್ರಿ ಬೀಟಿಂಗ್ ರಿಟ್ರೀಟ್ ಕಾರ್ಯಕ್ರಮ ನಡೆಯಿತು. ಈ ವೇಳೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್, ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಮತ್ತು ಹಲವು ಕೇಂದ್ರ ಸಚಿವರು ಉಪಸ್ಥಿತರಿದ್ದರು. ಈ ಸಮಾರಂಭ ಕದಮ್ ಕದಮ್ ಬಡಾಯೇ ಜಾ ಎಂಬ ಹಾಡಿನೊಂದಿಗೆ ಆರಂಭಗೊಂಡಿತು. ಬಳಿಕ ಅಮರ್ ಭಾರತಿ, ಇಂಧ್ರ ಧನುಷ್, ಜೈ ಜನಮ್ ಭೂಮಿ ಮತ್ತು ವೀರ್ ಸಿಯಾಚೆನ್ ಗೀತೆಗಳನ್ನು ಪೈಪ್ಸ್ ಮತ್ತು ಡ್ರಮ್ಸ್ ಬ್ಯಾಂಡ್ ಪ್ರಸ್ತುತ ಪಡಿಸಿತು. ಒಟ್ಟಾರೆ ಬೀಟಿಂಗ್ ರಿಟ್ರೀಟ್ ಕಾರ್ಯಕ್ರಮದಲ್ಲಿ ಸೇನೆ, ನೌಕಾಪಡೆ, ವಾಯುಪಡೆ ಹಾಗೂ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಗಳ ೩೦ಕ್ಕೂ ಅಧಿಕ ತಂಡಗಳು ನಾನಾ ಬಗೆಯ ಸಂಗೀತ ವಾದ್ಯಗಳನ್ನು ನುಡಿಸಿ ಗಮನ ಸೆಳೆಯಿತು. ಕೊನೆಯಲ್ಲಿ ಜನಪ್ರಿಯ ಸಾರೆ ಜಾಹಾನ್ಸೆ ಅಚ್ಛಾ ಗೀತೆಯೊಂದಿಗೆ ಬೀಟಿಂಗ್ ರಿಟ್ರೀಟ್ ಸಮಾಪನಗೊಂಡಿತು.

<><><><>

ಉತ್ತರಾಖಂಡದ ವಿವಿಧ ನಗರಗಳಲ್ಲಿ ನಡೆಯುತ್ತಿರುವ ೩೮ನೇ ರಾಷ್ಟ್ರೀಯ ಕ್ರೀಡಾಕೂಟ ೨೦೨೫ದಲ್ಲಿ ಹಲವು ವಿಭಾಗಗಳಲ್ಲಿ ಅದ್ಭುತ ಪ್ರದರ್ಶನಗಳು ಕಂಡುಬರುತ್ತಿವೆ. ನಿನ್ನೆ ಈಜು, ವುಶು ಮತ್ತು ಬ್ಯಾಡ್ಮಿಂಟನ್ ಕ್ರೀಡೆಗಳು ಹೆಚ್ಚಿನ ಗಮನ ಸೆಳೆದವು ಮತ್ತು ಕ್ರೀಡಾಪಟುಗಳು ದಾಖಲೆಯ ಪ್ರದರ್ಶನ ಮತ್ತು ರೋಚಕ ಗೆಲುವುಗಳನ್ನು ದಾಖಲಿಸಿದರು. ಕರ್ನಾಟಕವು ಐದು ಚಿನ್ನದ ಪದಕಗಳನ್ನು ಗೆದ್ದು ಅದ್ಭುತ ಆರಂಭ ಕಂಡಿತು.

ಧ್ವನಿ: ಸಾಕ್ಷಿ ಸಿಂಗ್ (೪೪ ಸೆಕೆಂಡ್ಸ್)

ಕ್ರೀಡಾಕೂಟದ ಮೊದಲ ದಿನವಾದ ನಿನ್ನೆ ಹಲವು ಅದ್ಭುತಗಳಿಗೆ ಸಾಕ್ಷಿಯಾಯಿತು, ಕರ್ನಾಟಕವು ಅದ್ಭುತ ಶುಭಾರಂಭ ಮಾಡಿ, ಐದು ಚಿನ್ನದ ಪದಕಗಳನ್ನು ಗೆದ್ದಿತು ಮತ್ತು ಡಾ. ಶ್ಯಾಮಾ ಪ್ರಸಾದ್ ಮುಖರ್ಜಿ ಈಜು ಸಂಕೀರ್ಣದಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಿತು. ಮಹಿಳೆಯರ ೨೦೦ ಮೀಟರ್

ಫ್ರೀಸ್ಟೈಲ್ ಸ್ಪರ್ಧೆಯಲ್ಲಿ, ಕರ್ನಾಟಕದ ಧಿನಿಧಿ ದೇಸಿಂಗು ಅಸಾಧಾರಣ ಪ್ರದರ್ಶನ ನೀಡಿದರು, ೧ ನಿಮಿಷ ೩.೧೪ ಸೆಕೆಂಡುಗಳ ದಾಖಲೆಯ ಸಮಯದೊಂದಿಗೆ ಚಿನ್ನದ ಪದಕವನ್ನು ಪಡೆದರು. ಪುರುಷರ ೧೦೦ ಮೀಟರ್ ಫ್ರೀಸ್ಟೈಲ್‌ನಲ್ಲಿ ಶ್ರೀಹರಿ ನಟರಾಜ್ ೯ ನಿಮಿಷ ೫೦.೫೮ ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರು. ಕರ್ನಾಟಕದ ಧಿನಿಧಿ ದೇಸಿಂಗು ಮಹಿಳೆಯರ ವಿಭಾಗದಲ್ಲಿ ದಿನದ ಎರಡನೇ ಚಿನ್ನದ ಪದಕ ಗೆದ್ದರು. ರಿಲೇ ಸ್ಪರ್ಧೆಗಳು ಕರ್ನಾಟಕಕ್ಕೆ ಮತ್ತಷ್ಟು ಕೀರ್ತಿ ತಂದುಕೊಟ್ಟವು.

<><><><>

ರುಷರ ಹಾಕಿ ಇಂಡಿಯಾ ಲೀಗ್ ಪಂದ್ಯಾವಳಿಯಲ್ಲಿ ತಮಿಳುನಾಡಿನ ಡ್ರ್ಯಾಗನ್ಸ್ ಮತ್ತು ಸೂರ್ಮಾ ಹಾಕಿ ಕ್ಲಬ್ ಸೆಮಿಫೈನಲ್‌ನಲ್ಲಿ ತಮ್ಮ ಸ್ಥಾನಗಳನ್ನು ಖಚಿತಪಡಿಸಿಕೊಂಡಿದೆ. ತಮಿಳುನಾಡಿನ ಡ್ರ್ಯಾಗನ್ಸ್ ನಿನ್ನೆ ರಾತ್ರಿ ಬಿರ್ಸಾಮುಂಡಾ ಹಾಕಿ ಕ್ರೀಡಾಂಗಣದಲ್ಲಿ ಉತ್ತರಪ್ರದೇಶದ ರುದ್ರಾಸ್ ವಿರುದ್ಧ ರೋಚಕ ೧-೧ ರಿಂದ ಡ್ರಾ ಮಾಡಿಕೊಂಡು ಸೆಮಿಫೈನಲ್‌ನಲ್ಲಿ ಸ್ಥಾನ ಗಿಟ್ಟಿಸಿತು. ಮತ್ತೊಂದು ಪಂದ್ಯದಲ್ಲಿ ಸೂರ್ಮಾ ಹಾಕಿ ಕ್ಲಬ್ ಶ್ರಾಚಿ ರಾಹ್ ಬೆಂಗಾಲ್ ಟೈಗರ್ಸ್ ವಿರುದ್ಧ ೩-೦ ಯಿಂದ ಜಯಗಳಿಸಿ, ಸೆಮಿಫೈನಲ್ ತಲುಪಿತು. ನಾಳೆ ಮೊದಲ ಸೆಮಿಫೈನಲ್‌ನಲ್ಲಿ ತಮಿಳುನಾಡು ಡ್ರ್ಯಾಗನ್ಸ್ ಹಾಗೂ ಶ್ರಾಚಿ ರಾಹ್ ಬೆಂಗಾಲ್ ಟೈಗರ್ಸ್ ಹಾಗೂ ೧ನೇ ಸೆಮಿಫೈನಲ್‌ನಲ್ಲಿ ಜೆಎಸ್‌ಡಬ್ಲ್ಯೂ ಸೂರ್ಮಾ ಹಾಕಿ ಕ್ಲಬ್, ಹೈದರಾಬಾದ್ ತುಫಾನ್ಸ್ ವಿರುದ್ಧ ಸೆಣಸಲಿದೆ.

<><><><>